## ಸ್ವರ್ಣವಲ್ಲೀಯ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ

# ಸಂಸ್ಕಾರದಿಂದ ವರ್ಣಸಂಕರ ತಡೆಗಟ್ಟಿ

ಪ್ರಜಾವಾಣಿ ವಾರ್ತೆ

ಯಲ್ಲಾಪುರ: `ಅಶಾಸ್ತ್ರೀಯ ವಿವಾಹದಿಂದಾಗಿ ಬ್ರಾಹ್ಮಣ ಸಮುದಾಯದಲ್ಲಿ ವರ್ಣಸಂಕರ ಹೆಚ್ಚುತ್ತಿದ್ದು ಇದನ್ನು ಸಂಸ್ಕಾರ ಬಲದಿಂದ ತಡೆಗಟ್ಟಬೇಕು. ಸಂಕರದ ಬದಲಾಗಿ ಸಂಸ್ಕಾರದ ತೇಜಸ್ಸಿನಿಂದ ಹವ್ಯಕ ಸಮಾಜ ಬೆಳಗಬೇಕು' ಎಂದು ಸ್ವರ್ಣವಲ್ಲೀಯ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಅಖಿಲ ಹವ್ಯಕ ಮಹಾಸಭಾ ಪಟ್ಟಣದ ಶಕ್ತಿ ಗಣಪತಿ ದೇವಸ್ಥಾನದ ಆವಾರದಲ್ಲಿ ಭಾನುವಾರ ಆಯೋಜಿಸಿದ್ದ `ಪ್ರತಿಬಿಂಬ' ಕಾರ್ಯಕ್ರಮದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

`ವಿವಾಹದ ಸಮಸ್ಯೆ, ವಿವಾಹ ವಿಚ್ಛೇದನ, ಆಸ್ತಿ ಪರಭಾರೆ ಮುಂತಾದ ಸಮಸ್ಯೆಗಳಿಂದ ಬ್ರಾಹ್ಮಣರ ಸ್ಥಿತಿ ಗಂಭೀರವಾಗಿದೆ. ಸಂಘಟನೆ, ಸಂಖ್ಯಾಬಲ ಹಾಗೂ ಸಂಸ್ಕಾರದಿಂದ ಬ್ರಾಹ್ಮಣ ಸಮುದಾಯದ ಶಕ್ತಿ ಹೆಚ್ಚಾಗಬೇಕು. ಸಮಸ್ಯೆಗಳನ್ನು ಸಂಘಟಿತರಾಗಿ ಎದುರಿಸುವ ಮೂಲಕ ಪರಿಹಾರ ಕಂಡುಕೊಳ್ಳಬೇಕು' ಎಂದು ಸಲಹೆ ನೀಡಿದರು.

`ಸೋಂದಾ ಸ್ವರ್ಣವಲ್ಲೀ ಮಠದಿಂದ ಹವ್ಯಕ ಆಸ್ತಿ ಸಂರಕ್ಷಣಾ ಸಮಿತಿ ರಚಿಸಲಾಗಿದೆ. ಸಹಕಾರಿ ಸಂಘದ ಪ್ರಮುಖರು ಈ ಸಮಿತಿಯಲ್ಲಿದ್ದು, ಹವ್ಯಕರ ಆಸ್ತಿ ರಕ್ಷಣೆಯ ಪ್ರಯತ್ನ ಯಶಸ್ವಿಯಾಗುತ್ತಿದೆ. ಆಡಂಬರದ ವಿವಾಹಕ್ಕೆ ಜನ ಮರಳಾಗಬಾರದು. ಹವ್ಯಕರ ಸಂಖ್ಯೆ ಹೆಚ್ಚಳವಾಗಬೇಕು' ಎಂದರು.



ಯಲ್ಲಾಪುರದಲ್ಲಿ ಅಖಿಲ ಹವ್ಯಕ ಮಹಾಸಭಾ ಆಯೋಜಿಸಿದ್ದ `ಪ್ರತಿಬಿಂಬ' ಕಾರ್ಯಕ್ರಮದ ಸಮಾರೋಪದಲ್ಲಿ ಸ್ವರ್ಣವಲ್ಲೀ ಶ್ರೀ ಆಶೀರ್ವಚನ ನೀಡಿದರು

ಅಖಿಲ ಹವ್ಯಕ ಮಹಾಸಭಾದ ಉಪಾಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಮಾತನಾಡಿ, `ಕುಮಟಾ, ಹೊನ್ನಾವರ, ಭಟ್ಕಳ ತಾಲ್ಲೂಕಿನಲ್ಲಿ ಹವ್ಯಕರ ವಲಸೆ ಹೆಚ್ಚಿದೆ. ಶೇ 25ರಷ್ಟು ಮನೆಗಳಿಗೆ ಬೀಗ ಬಿದ್ದಿದೆ. ಇದೀಗ ಶಿರಸಿ, ಯಲ್ಲಾಪುರದಲ್ಲೂ ಆರಂಭವಾಗಿದೆ. ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ಅಗತ್ಯ' ಎಂದು ಹೇಳಿದರು.

ವಿದ್ವಾನ್ ವಿಘ್ನೇಶ್ವರ ಭಟ್ ಬಿಸ್ಲೋಡ್, ವಿದ್ವಾನ್ ಮಂಜುನಾಥ ಭಟ್ ಮೊಟ್ಟೆಗದ್ದೆ, ಡಾ.ಎಸ್.ಎನ್. ಭಟ್ ಅಸ್ತಾಳ, ಕೃಷಿಕ ಎನ್.ಕೆ.ಭಟ್ ಅಗ್ಗಾಶಿಕುಂಬ್ರಿ, ಯಕ್ಷಗಾನ ಭಾಗವತ ಅನಂತ ಹೆಗಡೆ ದಂತಳಿಗೆ, ಕೃಷಿಕ ರಾಮಚಂದ್ರ ನಾರಾಯಣ ಹೆಗಡೆ ಕಂಚನಳ್ಳಿ, ಮದ್ದಲೆ ವಾದಕ ನರಸಿಂಹ ಭಟ್ ಹಂಡ್ರಮನೆ ಅವರನ್ನು ಸ್ವರ್ಣವಲ್ಲೀ ಶ್ರೀ ಸನ್ಮಾನಿಸಿದರು.

ಪ್ರಮುಖರಾದ ಪ್ರಮೋದ ಹೆಗಡೆ, ಹಿತ್ಲಳ್ಳಿ ನಾಗೇಂದ್ರ ಭಟ್ಟ ಇದ್ದರು. ವೆಂಕಟ್ರಮಣ ಭಟ್ಟ ವೇದಪಠನ ಮಾಡಿದರು. ಗೋಪಾಲಕೃಷ್ಣ ಭಟ್ಟ ಹಂಡ್ರಮನೆ ಸ್ವಾಗತಿಸಿದರು.